**ಕರಡುಪ್ರತಿ**

# ವಿಶ್ವಬ್ಯಾಂಕ್

ಸಂಪರ್ಕಗಳಿಗಾಗಿ: ದೆಹಲಿಯಲ್ಲಿ: ಗೀತಾಂಜಲಿ ಛೋಪ್ರಾ (91 11) 2461-7241

ಇಮ್ಮೈಲ್: **gchopra@worldbank.org**

ವಾಷಿಂಗ್‌ಟನ್‌ನಲ್ಲಿ: ಕರೀನಾ ಮಾನಸೇ (202) 473-1729

ಇ-ಮೈಲ್: kmanasseh@worldbank.org

## ಒರಿಸ್ಸಾದ ಅಭಿವೃದ್ಧಿಗೆ ವಿಶ್ವ ಬ್ಯಾಂಕಿನ ಸಹಾಯ

ವಾಷಿಂಗ್ಟನ್, ನವೆಂಬರ್, 2, 2004 – ವಿಶ್ವ ಬ್ಯಾಂಕ್ ಇಂದು ಒರಿಸ್ಸಾದ ಸಾಮಾಜಿಕ – ಅಭಿವೃದ್ಧಿಗಾಗಿ 125 ಅಮೆರಿಕನ್ ದಶಲಕ್ಷ ಡಾಲರ್‌ನ ಸಾಲಕ್ಕೆ ಮಂಜೂರಾತಿ ನೀಡಿದ್ದು ಭಾರತದ 16 ಅತ್ಯಂತ ಬಡ ರಾಜ್ಯಗಳಿಗೆ ಮಧ್ಯಮ ಅವಧಿ ಅಭಿವೃದ್ದಿ ಕಾರ್ಯಕ್ರಮಗಳಿಗೆ ನೀಡುವ ಸಹಾಯದ ಭಾಗ ಇದಾಗಿದೆ. ಈ ರಾಜ್ಯದಲ್ಲಿ ಅಗಾಧ ಕೊರತೆ ಮತ್ತು ನಿರ್ವಹಿಸಲಾಗದ ಸಾಲಗಳಿಂದಾಗಿ ಕೋಶೀಯ ಕೊರತೆಯ ಒತ್ತಡ ತೀವ್ರವಾಗಿದ್ದು ಬ್ಯಾಂಕ್ ನೀಡುವ ಸಹಾಯವು ಈ ನಿಟ್ಟಿನಲ್ಲಿ ರಾಜ್ಯಕ್ಕೆ ಪರಿಹಾರ ದೊರಕಿಸಲಿದೆ. ಈ ಬಗೆಯ ಒತ್ತಡಗಳಿಂದಾಗಿ ರಾಜ್ಯವು ಬಡತನ ನಿರ್ಮೂಲನೆಗೆ ತನ್ನ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಲಾರದಾಗಿದೆ. ಒರಿಸ್ಸಾದ ಸಾಮಾಜಿಕ ಮತ್ತು ಆರ್ಥಿಕ ಸೂಚ್ಯಂಕಗಳಾದ ಶಿಶು ಮರಣದರ, ಸಾಕ್ಷರತೆ, ನಿರೀಕ್ಷಿತ ಜೀವಮಾನ, ತಲಾ ಆದಾಯ ಮತ್ತ ಬಡತನ ರೇಖೆಗಳು ಭಾರತದ ಸರಾಸರಿ ಮಟ್ಟಕ್ಕಿಂತ ಕೆಳಮಟ್ಟದಲ್ಲಿದ್ದು ಇತ್ತೀಚಿನ ವರ್ಷಗಳಲ್ಲಿ ಈ ಸೂಚ್ಯಂಕಗಳು ಹೆಚ್ಚಿನ ದರದಲ್ಲಿ ಇಳಿಮುಖವಾಗುತ್ತಿದೆ.

‘ಭಾರತದ ಆರ್ಥಿಕ ಮತ್ತು ಸಾಮಾಜಿಕ ಸಾಧನೆಗಳು ಗಮನಾರ್ಹವಾಗಿದ್ದರೂ ಅನೇಕ ಅಂಶಗಳಲ್ಲಿ ಅಸಮಾನತೆಯು ಎದ್ದು ಕಾಣುತ್ತದೆ’, ಎಂದು ಜಾಗತಿಕ ಬ್ಯಾಂಕಿನ ಭಾರತದೇಶದ ನಿರ್ದೇಶಕರಾದ ಮೈಕೆಲ್ ಎಫ್ ಕಾರ್ಟರ್‌ರವರು ಹೇಳುತ್ತಾರೆ. ‘ಮಧ್ಯಮ ಮತ್ತು ಉನ್ನತ ಆದಾಯವಿರುವ ರಾಜ್ಯಗಳು 1991ರ ಉದಾರೀಕರಣದ ಲಾಭವನ್ನು ಪಡಯುವುದರಲ್ಲಿ ಶಕ್ತವಾಗಿವೆ. ಇದಕ್ಕೆ ಕಾರಣಗಳೆಂದರೆ ಉದಾರೀಕರಣದ ಪ್ರಾರಂಭದಲ್ಲಿದ್ದ ಪರಿಸ್ಥಿತಿಗಳು, ಆಡಳಿತ, ಮೂಲಭೂತ ಸೌಕರ್ಯಗಳು ಮತ್ತು ಮಾನವ ಸಂಪನ್ಮೂಲಗಳ ಉತ್ತಮ ಗುಣಮಟ್ಟ. ಈ ಕಾರಣದಿಂದಾಗಿ ಭಾರತದ ಶೇ.54 ಬಡಜನರು, ಅಥವಾ ಸುಮಾರು 150 ದಶಲಕ್ಷ ಜನರು ಈಗ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳಲ್ಲೇ ವಾಸಿಸುತ್ತಾರೆ.’

ಭಾರತದ ಪೂರ್ವ ಕರಾವಳಿಯಲ್ಲಿರುವ ಒರಿಸ್ಸ ರಾಜ್ಯವು 35 ದಶಲಕ್ಷ ಜನಸಂಖ್ಯೆಯನ್ನು ಹೊಂದಿದ್ದು ತಲಾ ಆದಾಯವು 250 ಅಮೇರಿಕನ್ ಡಾಲರ್‌ಗಳಾಗಿವೆ. ಖನಿಜ ಸಂಪತ್ತು, ಅರಣ್ಯಗಳು, ಸರೋವರಗಳು, ನದಿಗಳು, ದೀರ್ಘವಾದ ತೀರ ಪ್ರದೇಶದಂತಹ ವಿಪುಲವಾದ ಸ್ವಾಭಾವಿಕ ಸಂಪನ್ಮೂಲಗಳು ಇದ್ದರೂ ಸಾಂಸ್ಕೃತಿಕ ಹಾಗೂ ಪರಿಸರ ಪ್ರವಾಸೋದ್ಯಮದ ಅಸಮರ್ಪಕ ಬಳಕೆಯಿಂದಾಗಿ ಅರ್ಧಕ್ಕಿಂತ ಹೆಚ್ಚು ಜನರು ಬಡತನ ರೇಖೆಗಿಂತ ಕೆಳಗಿನ ಮಟ್ಟದಲ್ಲಿ ವಾಸಿಸುತ್ತಿದ್ದಾರೆ. ಒರಿಸ್ಸಾದಲ್ಲಿನ ತಲಾ ಆದಾಯವು 1989/90ರ ರಾಷ್ಟ್ರೀಯ ಸರಾಸರಿಯ ಶೇ.74 ಇದ್ದುದು 2001/02ರ ಸಾಲಿನಲ್ಲಿ ಇದು ಶೇ.58ಕ್ಕೆ ಇಳಿದಿದೆ.

ಈ ಸಾಲವು ಒಂದು ಬಾರಿ ನೀಡುವ ಯೋಜನೆಯಾಗಿದ್ದು ಒರಿಸ್ಸಾದ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮದ ಮೊದಲ ಹಂತಕ್ಕೆ ನೀಡುವ ಪ್ರೋತ್ಸಾಹವಾಗಿದೆ. ಈ ಕಾರ್ಯಕ್ರಮವು ಆರ್ಥಿಕ ಅಭಿವೃದ್ಧಿಯನ್ನು ಪುನಶ್ಚೇತನಗೊಳಿಸಲು ಹಾಗೂ ಬಡತನ ನಿರ್ಮೂಲನೆಗೆ ಮಧ್ಯಮ ಅವಧಿಯ ಯೋಜನೆಯಲ್ಲಿ ರಾಜ್ಯ ಸರಕಾರವು ಅವಶ್ಯವೆಂದು ಗುರುತಿಸಿರುವ ನಿರ್ಣಾಯಕವಾದ ಆರ್ಥಿಕ, ಸಾಮಾಜಿಕ, ಕೋಶೀಯ ಮತ್ತು ಆಡಳಿತಾತ್ಮಕ ಸುಧಾರಣೆಗಳನ್ನು ಹೊಂದಿದೆ.

ಒರಿಸ್ಸಾ ಸರಕಾರವು ಈ ಮುನ್ನ ತೆಗೆದುಕೊಂಡ ಕ್ರಮಗಳ ಆಧಾರದ ಮೇಲೆ ಸಾಲವನ್ನು ನೀಡಲಾಗುತ್ತಿದೆ. ಮತ್ತು 2005–09ರ ಅವಧಿಯಲ್ಲಿ ಜಾರಿಯಲ್ಲಿರುವ ಯೋಜನೆಗಳ ಪ್ರಸ್ತಾವಿತ ಶ್ರೇಣಿಯಲ್ಲಿ ಇದು ಮೊದಲನೆಯದಾಗಿದೆ.

ಈ ಸಾಲದ ಒಟ್ಟು ಮೊತ್ತದಲ್ಲಿ ವಿಶ್ವ ಬ್ಯಾಂಕ್‌ನ (ಐಬಿಆರ್‌ಡಿ)85 ದಶಲಕ್ಷ ಅಮೇರಿಕನ್ ಡಾಲರ್‌ಗಳ ಪಾಲು ಇದ್ದು ಅಂತರರಾಷ್ಟ್ರೀಯ ಅಭಿವೃದ್ಧಿ ಒಕ್ಕೂಟದ (ಐಡಿಎ) ಪಾಲು 45 ದಶಲಕ್ಷ ಅಮೇರಿಕನ್ ಡಾಲರ್‌ಗಳಾಗಿವೆ. ಈ ಯೋಜನೆಯಲ್ಲಿ ಭಾರತ ಸರಕಾರವು ಪ್ರಧಾನ ಸಾಲಗಾರವಾಗಿದ್ದು ನಿರ್ದಿಷ್ಟ ಆಂತರಿಕ ವ್ಯವಸ್ಥೆಗಳ ಮೂಲಕ ರಾಜ್ಯಕ್ಕೆ ಸಾಲದ ಮೊತ್ತವನ್ನು ಪಾವತಿಸಲಾಗುವುದು.

2003/04ರ ಸಾಲಿನಲ್ಲಿ ಸರಕಾರದ ಕೆಲವು ಸುಧಾರಣೆಗಳು ಮತ್ತು ಸಾಧನೆಗಳು ಈ ರೀತಿ ಇವೆ; ಸುಧಾರಿಸಿದ ಕೋಶೀಯ ಸ್ಥಿತಿಗತಿಳು; ರಾಜ್ಯದ ಶಾಸನ ಸಭೆಯಲ್ಲಿ ಮಂಡಿಸಲಾದ 'ಮಧ್ಯಮ ಅವಧಿಯ ಕೋಶೀಯ ಸುಧಾರಣಾ ಚೌಕಟ್ಟು (2003–08)'; ಗಣನೀಯ ಪ್ರಮಾಣದಲ್ಲಿ ಕೋಶೀಯ ಸ್ಥಿತಿಗತಿಗಳ ತಿದ್ದುಪಡಿಗೆ ಬದ್ಧತೆ; ಸಾರ್ವಜನಿಕ ಖರೀದಿಗಳಲ್ಲಿ ಸುಧಾರಣೆಗಳ ಅನುಷ್ಠಾನ ಮತ್ತು ರಾಜ್ಯದ ಹಣಕಾಸಿನ ಜವಾಬ್ದಾರಿಗಳ ನಿಖರ ವ್ಯಾಖ್ಯೆ; ಸಾರ್ವಜನಿಕ ಉದ್ಯಮಗಳ ಸುಧಾರಣೆಯಲ್ಲಿ ಪ್ರಗತಿ. ಇವುಗಳಲ್ಲಿ ನಷ್ಟದಲ್ಲಿರುವ ಉದ್ಯಮಗಳನ್ನು ಮುಚ್ಚುವುದು, ಪುನರ್‌ರಚಿಸುವುದು, ನಷ್ಟದಲ್ಲಿರುವ ಅನೇಕ ಉದ್ಯಮಗಳ ಖಾಸಗೀಕರಣವು ಒಳಗೊಂಡಿದೆ; ವಾಣಿಜ್ಯ ವಾತಾವರಣವನ್ನು ಸುಧಾರಿಸಲು ಮೊದಲ ಹಂತದ ಆಡಳಿತಾತ್ಮಕ ಕ್ರಮಗಳ ಅನುಷ್ಠಾನ; ಮತ್ತು ಆದ್ಯತೆಯ ಫಲಿತಾಂಶವನ್ನು ತರುವ ಆರೋಗ್ಯ ವಲಯದ ಕಾರ್ಯತಂತ್ರವನ್ನು ಕುರಿತ ಕ್ರಮಗಳ ಮಂಜೂರಾತಿ ಮತ್ತು ಪ್ರಕಟಣೆ.

ಒರಿಸ್ಸಾ ಸರಕಾರದ ಸುಧಾರಣಾ ಕಾರ್ಯಕ್ರಮವು ವಿವಿಧ ಮಟ್ಟದಲ್ಲಿದ್ದು ಈ ಕೆಳಗಿನವುಗಳನ್ನು ಒಳಗೊಂಡಿದೆ:

- ಅಭಿವೃದ್ಧಿಗೆ ಸಹಾಯಕವಾಗಿರುವ ಕೃಷಿ ಮತ್ತು ಭೂ ಆಡಳಿತಗಳನ್ನೊಳಗೊಂಡ ಸುಧಾರಣೆಗಳು, ಖಾಸಗಿ ಉದ್ಯಮಗಳ ನಿರ್ವಹಣೆಗೆ ನಿಯಂತ್ರಣಗಳ ಚೌಕಟ್ಟು ಮತ್ತು ಸಾರ್ವಜನಿಕ ಉದ್ಯಮಗಳ ಖಾಸಗೀಕರಣ ಹಾಗೂ ಪುನರ್‌ರಚನೆ;

- ಆದಾಯ ವ್ಯವಸ್ಥೆಯನ್ನು ಸುಧಾರಿಸುವ ಗುರಿಹೊಂದಿರುವ ಕೋಶೀಯ ಸುಧಾರಣೆಗಳು, ಅನುತ್ಪದಾಯಕ ವೆಚ್ಚಗಳ ಉಳಿತಾಯ, ಆದ್ಯತಾವಲಯಗಳ ಮೇಲೆ ಉತ್ತಮ ಗುಣಮಟ್ಟದ ಸಾರ್ವಜನಿಕ ಖರ್ಚಿನ ಹೆಚ್ಚಳ ಮತ್ತು ಸಾರ್ವಜನಿಕ ಬಂಡವಾಳದ ಪರಿಣಾವನ್ನು ಹೆಚ್ಚಿಸುವುದು.

- ಸರಕಾರದ ಮತ್ತು ಆಡಳಿತದ ಪರಿಣಾವನ್ನು ಬಲಗೊಳಿಸಲು ಕ್ರಮಗಳು, ಇವುಗಳಲ್ಲಿ ಸಾರ್ವಜನಿಕ ವೆಚ್ಚದ ನಿರ್ವಹಣೆ, ಹಣಕಾಸಿನ ಜವಾಬ್ದಾರಿ, ಸಾರ್ವಜನಿಕ ಖರೀದಿ, ಸೇವೆಗಳ ವಿತರಣೆ ಮತ್ತು ಸರಕಾರದ ಸಂಘಟನೆ; ಮತ್ತು

- ಮಾನವ ಸಂಪನ್ಮೂಲವನ್ನು ವೃದ್ದಿಸುವ ಮತ್ತು ಬಡತನ ನಿರ್ಮೂಲನೆಗೆ ಬಂಡವಾಳ, ಇವುಗಳಲ್ಲಿ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು ಒಳಗೊಂಡಿವೆ.

'ಒರಿಸ್ಸಾದ ಸುಧಾರಣೆಗಳು ಬಡತನ ನಿರ್ಮೂಲನೆಯ ನಿಟ್ಟಿನಲ್ಲಿ ಉತ್ತಮ ಪರಿಣಾಮವನ್ನು ಬೀರುವ ನಿರೀಕ್ಷೆ ಇದೆ' ಎಂದು ಬ್ಯಾಂಕಿನ ಈ ಯೋಜನೆಯ ನಿರ್ವಹಣೆಗಾರರಾದ ವಿ.ಜೆ.ರವಿಶಂಕರ್ ಮತ್ತು ಮರೀನಾ ವೆಸ್ ಹೇಳುತ್ತಾರೆ. 'ನಿರ್ದಿಷ್ಟವಾಗಿ, ಕೋಶೀಯ ಸುಧಾರಣೆಗಳು ಸಂಪನ್ಮೂಲಗಳ ಹೆಚ್ಚಿನ ಪಾಲು, ಬಡತನ ನಿರ್ಮೂಲನೆಯ ನಿಟ್ಟಿನಲ್ಲಿ ಉದ್ದೇಶಿತವಾಗಿರುವ ಅಭಿವೃದ್ಧಿ ವೆಚ್ಚಗಳಲ್ಲಿ ಪ್ರತಿಫಲಿತವಾಗುತ್ತಿವೆ; ಬಡತನ ನಿರ್ಮೂಲನೆಯ ಸುಧಾರಿತ ಮೇಲ್ವಚಾರಣೆಯು ಈ ಕಾರ್ಯಕ್ರಮದ ಮೇಲೆ ಸರಕಾರವು ಹೆಚ್ಚಿನ ನಿಗಾ ಇಡುವಂತೆ ಸಹಾಯ ಮಾಡುವುದಲ್ಲದೆ ಸಂಬಂಧಿತ ನೀತಿಗಳು ಮತ್ತು ಕಾರ್ಯಕ್ರಮಗಳಲ್ಲಿ ಬದಲಾವಣೆ ತರಲು ಸಹಾಯ ಮಾಡುತ್ತವೆ; ಆಡಳಿತ ಸುಧಾರಣೆಗಳು ಭ್ರಷ್ಟಾಚಾರವನ್ನು ಕಡಿಮೆಗಳಿಸಲು ಸಹಾಯ ಮಾಡುತ್ತವೆ; ಸರಕಾರದ ನಿಯಂತ್ರಣಗಳನ್ನು ಕಡಿಮೆ ಮಾಡುವುದರಿಂದ ಬಂಡವಾಳ ಹೂಡಿಕೆಗೆ ವಾತಾವರಣವನ್ನು ನಿರ್ಮಿಸಲು ಸಹಕಾರಿಯಾಗಿದೆ, ವಿಶೇಷವಾಗಿ ಇದು ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳಿಗೆ ಸಹಕಾರಿಯಾಗಿದ್ದು ಆ ಮೂಲಕ ಕೃಷಿಯೇತರ ಉದ್ಯೋಗ ನಿರ್ಮಾಣದಲ್ಲಿ ಹೆಚ್ಚಿನ ಸಹಕಾರಿಯಾಗಿದೆ.'

ಭಾರತದಲ್ಲಿ ವಿಶ್ವಬ್ಯಾಂಕಿನ ಚಟುವಟಿಕೆಗಳ ಕುರಿತಾದ ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವೆಬ್‌ಸೈಟ್‌ಅನ್ನು ನೋಡಿ:

http://www.worldbank.org.in/